# ಪ್ರಕಟಣೆ

2020-21ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗೆ ಸಂಬಂಧಿಸಿದಂತೆ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳನ್ನು ಭರ್ತಿ ಮಾಡುವ ಸಂಬಂಧ ಅಂತಿಮ ಸುತ್ತಿನ ಸೀಟು ಹಂಚಿಕೆ ಪಟ್ಟಿಯನ್ನು ಇಲಾಖಾ ವೆಬ್ ಸೈಟ್ ನಲ್ಲಿ ದಿನಾಂಕ:23-04-2021 ರಂದು ಪ್ರಕಟಿಸಿದ್ದು, ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ನಿಗದಿತ ದಾಖಲಾತಿ ಶುಲ್ಕ ಪಾವತಿಸಿ ಪರಿಶೀಲನಾ ಕೇಂದ್ರದ ಮೂಲಕ ಕಾಲೇಜಿಗೆ ದಾಖಲಾತಿ ಹೊಂದಲು ದಿನಾಂಕ: 23-04-2021 ರಿಂದ 28-04-2021ರವರೆಗೆ ಅವಕಾಶ ಕಲ್ಪಿಸಲಾಗಿತ್ತು.

ರಾಜ್ಯದಲ್ಲಿ ಕೊರೊನಾ ವೈರಸ್ (ಕೋವಿಡ್-19) ಸಾಂಕ್ರಾಮಿಕವಾಗಿ ಹರಡುತ್ತಿರುವುದನ್ನು ತಡೆಗಟ್ಟಲು ಮಾನ್ಯ ಕರ್ನಾಟಕ ಸರ್ಕಾರವು RD 158 TNR 2020 Bengaluru dated:26-04-2021ರಂತೆ ದಿನಾಂಕ:12-05-2021 ರವರೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ದಿನಾಂಕ:23-04-2021 ರಂದು ಪ್ರಕಟಿಸಲಾದ ಅಂತಿಮ ಸುತ್ತಿನ ಸೀಟು ಹಂಚಿಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ದಾಖಲಾತಿಗಾಗಿ ಶುಲ್ಕ ಪಾವತಿಸಲು ನಿಗದಿಪಡಿಸಿದ್ದ **ಕೊನೆಯ ದಿನಾಂಕವನ್ನು 30-04-2021 ರವರೆಗೆ ವಿಸ್ತರಿಸಲಾಗಿದೆ**. ಸದರಿ ದಿನಾಂಕದೊಳಗೆ ಆನ್ ಲೈನ್ ನಲ್ಲಿ ನಿಗದಿತ ಶುಲ್ಕ ಪಾವತಿಸಿದ ಅಭ್ಯರ್ಥಿಗಳಿಗೆ ದಿನಾಂಕ:13-05-2021 ರಂದು ಅಥವಾ ಕೋವಿಡ್-19ರ ಹಿನ್ನೆಲೆ ಮಾನ್ಯ ಸರ್ಕಾರವು ಹೊರಡಿಸಬಹುದಾದ ಆದೇಶದನ್ವಯ ಸಂಬಂಧಪಟ್ಟ ಪರಿಶೀಲನಾ ಕೇಂದ್ರಗಳ ಮೂಲಕ ಕಾಲೇಜಿಗೆ ದಾಖಲಾತಿ ಹೊಂದಲು ಅವಕಾಶ ಕಲ್ಪಿಸಲಾಗುವುದು.

ಮುಂದುವರೆದು ದಾಖಲಾತಿ ಶುಲ್ಕ ವಿನಾಯಿತಿ ಇರುವ ಅಭ್ಯರ್ಥಿಗಳು ತಮಗೆ ಹಂಚಿಕೆಯಾಗಿರುವ ಕಾಲೇಜಿಗೆ ದಾಖಲಾಗಲು ಬಯಸಿದ್ದಲ್ಲಿ ತಮ್ಮ User ID ಮೂಲಕ Login ಆಗಿ **ಕಾಲೇಜಿಗೆ ದಾಖಲಾಗಲು (I am Willing to get admission in the allotted College) ಇಚ್ಛೆಸಿದ್ದೇನೆ** ಎಂದಿರುವ ಕಡೆ **YES ಅಥವಾ NO** ಎಂದು **ದಿನಾಂಕ:30-04-2021** ರೊಳಗಾಗಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. **YES** ಎಂದು ನಮೂದಿಸಿದ ಅಭ್ಯರ್ಥಿಗಳನ್ನು ಮಾತ್ರ ದಾಖಲಾತಿಗಾಗಿ ಪರಿಗಣಿಸಲಾಗುವುದು. ಇಲ್ಲದಿದ್ದಲ್ಲಿ ತಮಗೆ ಹಂಚಿಕೆಯಾದ ಸೀಟು ತನ್ ತಾನೇ ರದ್ದಾಗುವುದು.

ಸಹಿ/-

ವಿಶೇಷಾಧಿಕಾರಿ

ಪ್ರತಿಯನ್ನು:1.ಸಂಬಂಧಪಟ್ಟ CTE/DIET ಸಂಸ್ಥೆಗಳ ಪ್ರಾಂಶುಪಾಲರಿಗೆ ಹಾಗೂ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

2. ರಾಜ್ಯದ ಸಂಬಂಧಪಟ್ಟ ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.